**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 111/2023**

| | | | |
|---|---|---|---|
| **ಹೆಸರು** | : | **ಮಹೇಬೂಬ ಸಾಬ** | ಚಾ.ಸಾ.4 |
| **ತಂದೆಯ ಹೆಸರು** | : | **ಇಮಾಮ್ ಸಾಬ್** | ಪ್ರಾ.ಸಾ.4 |
| **ವಯಸ್ಸು** | : | **43 ವರ್ಷ** | ದಿನಾಂಕಃ 09-07-2026 |
| **ಉದ್ಯೋಗ** | : | **ಕೂಲಿ ಕೆಲಸ** | |
| **ವಾಸಸ್ಥಳ** | : | **ತೇಗಲತಿಪ್ಪಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆರೋಪಿಯ ಪರಿಚಯವಿದೆ. ಚಾಸಾ-1ರವರ ಪರಿಯಚವಿದೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 17-04-2019 ರಂದು ಒಂದು ವಿಷಯಕ್ಕೆ ಚಾಸಾ-1ರವರನ್ನು ವಿಚಾರಿಸಲು ಸುಲೇಪೇಟಗೆ ಹೋದಾಗ ಅಲ್ಲಿ ಅವರು ನನಗೆ ತನಿಳಿಸಿದ್ದೇನೆಂದರೆ ದಿನಾಂಕ 16-04-2019ರಂದು ಬೆಳಗ್ಗೆ 7 ಗಂಟೆಗೆ ಒಂದು ಗೂಡ್ಸ ಆಟೋ ಸಂಖ್ಯೆ KA 32 B 8286 ನೇದರಲ್ಲಿ ತತ್ತಿಗಳನ್ನು ಇಟ್ಟುಕೊಂಡು ಗಡಿಕೇಶ್ವರ, ರಾಯಕೋಡ, ಭೂತಪುರ, ರೂದನೂರ, ಚಿಂತಪಳ್ಳಿ ಗ್ರಾಮಗಳಲ್ಲಿ ಅಂಗಡಿಗಳಲ್ಲಿಯ ತ್ತತಿ ಮಾರಾಟ ಮಾಡಿ ಮರಳಿ ಹಣ ಸಂಗ್ರಹಿಸಿ ಇಟ್ಟುಕೊಳ್ಳುತ್ತಾ ಬರುತ್ತಿದ್ದಾಗ ಭಂಟನಳ್ಳಿ ಗ್ರಾಮಕ್ಕೆ ಬರುವ ಮುಖ್ಯ ರಸ್ತೆಯ ಮಧ್ಯದಲ್ಲಿ ನನ್ನ ಅಂಗಡಿಯಲ್ಲಿ ತತ್ತಿ ಕೊಟ್ಟು ಹಣ ಪಡೆಯುತ್ತಿದ್ದನ್ನ ಯಾರೋ ಒಬ್ಬ ವ್ಯಕ್ತಿ ಮತ್ತು ಇನ್ನೊಬ್ಬ ವ್ಯಕ್ತಿ ಕೂಡಿ ಒಂದು ನಂಬರ ಪ್ಲೇಟ್ ಇರಲಾರದ ಸೀಲ್ವರ ಬಣ್ಣದ ಸೂಪರ ಸ್ಪೇಲಂಡರ ಮೊಟರ ಸೈಕಲ ಮೇಲೆ ಬಂದು ಅಡ್ಡಲಾಗಿ ನಿಲ್ಲಿಸಿದರು ಅಂತ ತಿಳಿಸಿದರು ಎಂದರೆ ಸರಿಯಲ್ಲ. ಮುಂದುವರೆದು ಒಬ್ಬನ ಮುಖಕ್ಕೆ ಕರ್ಚಿಪ್ ಕಟ್ಟಿಕೊಂಡು ಇನ್ನೊಬ್ಬ ಮಾಸ್ಕ ಧರಿಸಿ ನನ್ನ ಹತ್ತಿರ ಇದ್ದ ಬ್ಯಾಗನಲ್ಲಿಯ ರೂ. 10,0225/- ಮತ್ತು 15 ಸಾವಿರ ಕಿಮ್ಮತ್ತಿನ ಮೊಬೈಲ್ ಕಸಿದುಕೊಂಡು ಹೋಗುವಾಗ ಕರ್ಚಿಪ್ ಕಟ್ಟಿಕೊಂಡಿದ್ದು ಕೆಳಗೆ ಜಾರಿದ್ದರಿಂದ ಆತನು ತೇಗಲತಿಪ್ಪಿ ಗ್ರಾಮದಲ್ಲಿ ನನ್ನ ಅಂಗಡಿ ಹತ್ತಿರ ನೋಡಿ ವ್ಯಕ್ತಿ ಮತ್ತು ಇನ್ನೊಬ್ಬ ವ್ಯಕ್ತಿ ಸುಮಾರು 24 ರಿಂದ 26 ವಯಸ್ಸಿನ ವ್ಯಕ್ತಿ ಅಂತ ತಿಳಿಸಿದರಾ ಎಂದರೆ ಸರಿಯಲ್ಲ. ಈ ಘಟನೆ ಜರುಗಿದಾಗ ಸುಮಾರು 2.30 ಗಂಟೆ

ಎಂದು ತಿಳಿದರೂ ಎಂದರೆ ಸರಿಯಲ್ಲ. ಆಗ ನಾನು ನಮ್ಮ ಮಾಲೀಕರಾದ ಚಾಸಾ-2ರವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದೇ ಎಂದರೆ ಸರಿಯಲ್ಲ. ಒಟ್ಟು 12,000 ತತ್ತಿ ಇದ್ದು 400 ಟ್ರೇ ತೆಗೆದುಕೊಂಡು ಹೋಗಿ ಅವುಗಳಲ್ಲಿ ಮಾರಾಟ ಮಾಡಿದ ಹಣ ರೂ. 10,025/- ಇತ್ತು ಅಂತ ತಿಳಿಸಿದರೂ ಎಂದರೆ ಸರಿಯಲ್ಲ. ನನ್ನ ಕಿರಾಣಿ ಅಂಗಡಿಯ ಹತ್ತಿರ ಚಾಸಾ-1ರವರು ನೋಡಿದ ವ್ಯಕ್ತಿ ಮತ್ತು ನಾನು ಹೇಳಿದ ಹಾಗೇ ಆರೋಪಿತರಿಬ್ಬರು ಕೂಡಿ ಚಾಸಾ-1ರವರ ಹತ್ತಿರ ಹಣ ಮತ್ತು ಓಪೋ ಎಫ್-11 ಪ್ರೊ ಮೊಬೈಲನ್ನು ಜಬರದಸ್ತಿಯಿಂದ ಕಿತ್ತುಕೊಂಡಿದ್ದರು ಎಂದರೆ ಸರಿಯಲ್ಲ. ನಾವು 2ನೇ ಆರೋಪಿಯನ್ನು ವಿಚಾರಿಸಲಾಗಿ ಠಾಣೆಯಲ್ಲಿ ಪೋಲಿಸರ ಮುಂದೆ 2ನೇ ಆರೋಪಿ 1ನೇ ಆರೋಪಿಯ ಹೆಸರು ಹೇಳಿದ್ದನು ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿದಾರರ ದಿನಾಂಕ 17-04-2019 ನೇದರ ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿದಾರರು ನಿರಾಕರಿಸಿರುತ್ತಾರೆ. ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u> ಇಲ್ಲಾ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**